# ಕ್ರಿಕೆಟ್ ವಿಶ್ವಕಪ್ 2023ರ ಭಾರತ ತಂಡದ ಆಟಗಾರರು


ರೋಹಿತ್ ಶರ್ಮಾ (C)


ಹಾರ್ದಿಕ್ ಪಾಂಡ್ಯ (VC)


ವಿರಾಟ್ ಕೊಹ್ಲಿ


ಕೆ.ಎಲ್. ರಾಹುಲ್


ಶ್ರೇಯಸ್ ಅಯ್ಯರ್


ಶುಭಮನ್ ಗಿಲ್


ಇಶಾನ್ ಕಿಶನ್


ರವೀಂದ್ರ ಜಡೇಜ


ಸೂರ್ಯಕುಮಾರ್ ಯಾದವ್


ಅಕ್ಷರ್ ಪಟೇಲ್


ಕುಲದೀಪ್ ಯಾದವ್


ಶಾರ್ದೂಲ್ ಠಾಕೂರ್


ಮೊಹಮ್ಮದ್ ಸಿರಾಜ್


ಜಸ್‌ಪ್ರೀತ್ ಬೂಮ್ರಾ


ಮೊಹಮ್ಮದ್ ಶಮಿ

ಬಳಿಕ ಆಟಗಾರರು ಮಾಧ್ಯಮಗಳಿಗೆ ನೀಡುತ್ತಿರುವ ಹೇಳಿಕೆಗಳೇ ಇದಕ್ಕೆ ಸಾಕ್ಷಿಯಂತಿವೆ. 'ನಮ್ಮನ್ನು ಪ್ರೀತಿಸುವ ಅಭಿಮಾನಿಗಳಿಗಾಗಿ ಹೊಸ ವಿಶ್ವಕಪ್ ನೋಡಿ ಸಂಭ್ರಮಿಸುವ ನೆನಪುಗಳನ್ನು ತಂದುಕೊಡಲು ಕಾಯುತ್ತಿದ್ದೇವೆ' ಎಂದು ವಿರಾಟ್ ಕೊಹ್ಲಿ ಹೇಳಿದ್ದಾರೆ.

'ನಮ್ಮ ಅಭಿಮಾನಿಗಳ ಉತ್ಸಾಹ ಮತ್ತು ಅಚಲ ಬೆಂಬಲವೇ ವಿಶ್ವಕಪ್ ಗೆಲ್ಲುವ ನಮ್ಮ ಸಂಕಲ್ಪವನ್ನು ಉತ್ತೇಜಿಸುತ್ತದೆ. ಹಿಂದಿನ ವಿಶ್ವಕಪ್ ವಿಜಯಗಳ ನೆನಪುಗಳು, ವಿಶೇಷವಾಗಿ 2011ರ ಅಪ್ರತಿಮ ಗೆಲುವು ನಮ್ಮ ಹೃದಯದಲ್ಲಿ ಭದ್ರವಾಗಿದೆ. ನಮ್ಮ ಅಭಿಮಾನಿಗಳ ಭಾವನೆಗಳನ್ನು ಸಂಪೂರ್ಣವಾಗಿ ನಿಜ ಮಾಡಲು ಕಾಯುತ್ತಿದ್ದೇನೆ' ಎಂದಿರುವ ವಿರಾಟ್ ಮಾತುಗಳೇ ಭಾರತದ ಆತ್ಮವಿಶ್ವಾಸದ ಪ್ರತೀಕದಂತಿವೆ.

ಭಾರತದ ಪ್ರಮುಖ ಬ್ಯಾಟಿಂಗ್ ಶಕ್ತಿ ವಿರಾಟ್ ಕೊಹ್ಲಿ ತಂಡದ ಬೆನ್ನೆಲುಬು. ಈಗ ನಾಯಕತ್ವದ ಒತ್ತಡವೂ ಇಲ್ಲದ ಕಾರಣ ಸರಾಗವಾಗಿ ರನ್ ಹೊಳೆ ಹರಿಯಬಹುದು ಎನ್ನುವ ನಿರೀಕ್ಷೆಯಿದೆ. ವಿರಾಟ್ 2008ರಲ್ಲಿ ಅಂತರರಾಷ್ಟ್ರೀಯ ಕ್ರಿಕೆಟ್‌ಗೆ ಪದಾರ್ಪಣೆ ಮಾಡಿದಾಗಿನಿಂದ ಅವರ ಮೇಲೆ ಬೆಟ್ಟದಷ್ಟು ಕನಸುಗಳಿವೆ. 280 ಏಕದಿನ ಪಂದ್ಯಗಳಿಂದ ಅವರು ಒಟ್ಟು 13,027 ರನ್ ಕಲೆ ಹಾಕಿದ್ದಾರೆ. 2011ರಲ್ಲಿ

## ವಿಶ್ವಕಪ್‌ನಲ್ಲಿ ಭಾರತ ತಂಡ ಮುನ್ನಡೆಸಿದವರ ಸಾಧನೆ

| ವರ್ಷ | ನಾಯಕ | ಪಂದ್ಯ | ಗೆಲುವು | ಸೋಲು | ಹಂತ |
|---|---|---|---|---|---|
| 1975 | ಎಸ್. ವೆಂಕಟರಾಘವನ್ | 3 | 1 | 2 | ಗುಂಪು |
| 1979 | ಎಸ್. ವೆಂಕಟರಾಘವನ್ | 3 | 0 | 3 | ಗುಂಪು |
| 1983 | ಕಪಿಲ್ ದೇವ್ | 8 | 6 | 2 | ಚಾಂಪಿಯನ್ |
| 1987 | ಕಪಿಲ್ ದೇವ್ | 7 | 5 | 2 | ಸೆಮಿಫೈನಲ್ |
| 1992★ | ಮಹಮ್ಮದ್ ಅಜರುದ್ದೀನ್ | 8 | 2 | 5 | ರೌಂಡ್‌ರಾಬಿನ್ |
| 1996 | ಮಹಮ್ಮದ್ ಅಜರುದ್ದೀನ್ | 7 | 4 | 3 | ಸೆಮಿಫೈನಲ್ |
| 1999 | ಮಹಮ್ಮದ್ ಅಜರುದ್ದೀನ್ | 8 | 4 | 4 | ಸೂಪರ್ ಸಿಕ್ಸ್ |
| 2003 | ಸೌರವ್ ಗಂಗೂಲಿ | 11 | 9 | 2 | ರನ್ನರ್ಸ್ ಅಪ್ |
| 2007 | ರಾಹುಲ್ ದ್ರಾವಿಡ್ | 3 | 1 | 2 | ಗುಂಪು |
| 2011★ | ಮಹೇಂದ್ರಸಿಂಗ್ ಧೋನಿ | 9 | 7 | 1 | ಚಾಂಪಿಯನ್ |
| 2015 | ಮಹೇಂದ್ರಸಿಂಗ್ ಧೋನಿ | 8 | 7 | 1 | ಸೆಮಿಫೈನಲ್ |
| 2019★ | ವಿರಾಟ್ ಕೊಹ್ಲಿ | 9 | 7 | 2 | ಸೆಮಿಫೈನಲ್ |

★ 1992ರ ವಿಶ್ವಕಪ್‌ನ ಶ್ರೀಲಂಕಾ ವಿರುದ್ಧದ ಪಂದ್ಯದಲ್ಲಿ ಫಲಿತಾಂಶ ಬಂದಿರಲಿಲ್ಲ.

★ 2011ರ ವಿಶ್ವಕಪ್‌ನ ಇಂಗ್ಲೆಂಡ್ ಎದುರಿನ ಪಂದ್ಯ ಟೈ ಆಗಿತ್ತು.

★ 2019ರ ಟೂರ್ನಿಯಲ್ಲಿ ನ್ಯೂಜಿಲೆಂಡ್ ವಿರುದ್ಧದ ಪಂದ್ಯದಲ್ಲಿ ಫಲಿತಾಂಶ ಬಂದಿರಲಿಲ್ಲ.